ಆ) ಹಾಗಿದ್ದಲ್ಲಿ ಈ ರಸ್ತೆಯನ್ನು ಅಗಲೀಕರಣ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು,

ಇ) ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗುವುದೇ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗಿ ಇಂಧನ ಸಚಿವರು)

ಅ) ಬಂದಿದೆ

ಆ) ಹಲಗೇರಿ–ಹಾನಕಲ್ ರಸ್ತೆ (ರಾಜ್ಯ ಹೆದ್ದಾರಿ–26) ಒಟ್ಟು 111 50 ಕಿಮೀ ಉದ್ದ ಶಿವಮೊಗ್ಗ ವಿಭಾಗದಲ್ಲಿ ಹಾದು ಹೋಗುತ್ತಿದ್ದು, ಇದರಲ್ಲಿ ಹೊಸನಗರ ತಾಲ್ಲೂಕಿನ ಕಿಮೀ, 86 60 ರಿಂದ 173 3 ಕಿಮೀ ವರೆಗೆ ಒಟ್ಟು 87 30 ಕಿಮೀ ಹಾದುಹೋಗಿರುತ್ತದೆ ಇದರಲ್ಲಿ ಸದರಿ ರಸ್ತೆಯ ವಿವಿಧ ಬೈನೇಜುಗಳಲ್ಲಿ ಸುಮಾರು 22 25 ಕಿಮೀ ಗಳ ಉದ್ದದ ರಸ್ತೆಯು ಏಕಪಥ ರಸ್ತೆಯಾಗಿದ್ದು, ಮಧ್ಯಪಥ ರಸ್ತೆಯನ್ನಾಗಿ ಮಾರ್ಪಡಿಸುವುದು ತೀರಾ ಅವಶ್ಯವಿರುವುದು ಇಲಾಖಾ ಗಮನಕ್ಕೆ ಬಂದಿದೆ

2005–08 ರವರೆಗಿನ ಮೂರು ವರ್ಷಗಳ ರಾಜ್ಯ ಹೆದ್ದಾರಿ ನಿರ್ವಹಣಾ ಯೋಜನೆಯಡಿ ಅಗಲೀಕರಣಕ್ಕೆ ಅವಕಾಶವಿಲ್ಲದಿರುವುದರಿಂದ ಸದರಿ ರಸ್ತೆಯ ಅಗಲೀಕರಣ ಕಾಮಗಾರಿಯನ್ನು ನಿರ್ವಹಣೆ ಯೋಜನೆಯಡಿಯಲ್ಲಿ ಕೈಗೊಂಡಿರುವುದಿಲ್ಲ ಸದರಿ ರಸ್ತೆಯಲ್ಲಿ ಅಧಿಕ ಬಾರದ ವಾಹನ ಸಂಚಾರ ದಟ್ಟವಾಗಿದ್ದು, ಅಗಲೀಕರಣ ಹಾಗೂ ಅಭಿವೃದ್ಧಿ ಕಾಮಗಾರಿಗಳಿಗೆ ರೂ 300 ಲಕ್ಷಗಳು ಅವಶ್ಯವಿದ್ದು, ಈ ಬಗ್ಗೆ ಪ್ರಸ್ತಾವನೆಯು ತಯಾರಿಕೆಯ ಹಂತದಲ್ಲಿದೆ

ಇ) ಸದರಿ ರಸ್ತೆಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ಕೈಗೊಳ್ಳಲಾಗುತ್ತಿರುವ 2005–08 ರವರೆಗಿನ ಮೂರು ವರ್ಷಗಳ ರಾಜ್ಯ ಹೆದ್ದಾರಿ ನಿರ್ವಹಣಾ ಯೋಜನೆಯಡಿ, ಆಯ್ದ ಭಾಗಗಳಲ್ಲಿ ಮರುಡಾಂಬರೀಕರಣ ಮಾಡಲಾಗಿದ್ದು, ಉಳಿದಂತೆ ಗುಂಡಿ ಮುಚ್ಚಿ ರಸ್ತೆಯನ್ನು ಸಂಚಾರ ಯೋಗ್ಯವನ್ನಾಗಿ ಇಡಲಾಗಿದೆ

359 (839) ಶ್ರೀ ಹಾಲಪ್ಪ ಹೆಚ್ (ಹೊಸನಗರ ಕ್ಷೇತ್ರ) ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ತಾಲ್ಲೂಕು ಚಿತ್ರ ಶೆಟ್ಟಿಹಳ್ಳಿಯ ಅಭಯಾರಣ್ಯದ ಗ್ರಾಮದಲ್ಲಿ ವಿದ್ಯುತ್ ಸಂಪರ್ಕವಿಲ್ಲದೆ ಅಲ್ಲಿನ ನಾಗರೀಕರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಗ್ರಾಮಕ್ಕೆ ವಿದ್ಯುದ್ದೀಕರಣಗೊಳಿಸಲು ಸರ್ಕಾರ ಕೈಗೊಂಡ ಕ್ರಮವೇನು,

ಇ) ಗ್ರಾಮೀಣ ಭದ್ರತಾ ಯೋಜನೆಯಡಿಯಲ್ಲಿ ವಿದ್ಯುದ್ದೀಕರಣ ಗೊಳಿಸಲು ಈ ಗ್ರಾಮವನ್ನು ಆಯ್ಕೆ ಮಾಡಲಾಗುವುದೇ,

ಈ) ಈ ಕಾಮಗಾರಿಗೆ ತಗಲುವ ವೆಚ್ಚವೆಷ್ಟು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗಿ ಇಂಧನ ಸಚಿವರು),

ಅ) ಬಂದಿದೆ

ಆ) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯು ಶಿವಮೊಗ್ಗ ತಾಲ್ಲೂಕಿನ ಶೆಟ್ಟಿಹಳ್ಳಿ ಮತ್ತು ಚಿತ್ರ ಶೆಟ್ಟಿಹಳ್ಳಿ ಗ್ರಾಮಗಳನ್ನು ಗ್ರಾಮೀಣ ಭದ್ರತಾ ಯೋಜನೆಯಡಿಯಲ್ಲಿ ವಿದ್ಯುದ್ದೀಕರಣಗೊಳಿಸಲು ಪ್ರಸ್ತಾವನೆಯನ್ನು ನವೀಕರಿಸಬಹುದಾದ ಇಂಧನ ಮೂಲಗಳ ಮಂತ್ರಾಲಯ, ನವದೆಹಲಿ ಇವರಿಗೆ ಕಳುಹಿಸಿಕೊಡಲಾಗಿತ್ತು ಆದರೆ ಈ ಗ್ರಾಮಗಳಿಗೆ ಪ್ರತ್ಯೇಕ ಜನಗಣತಿ ಸಂಖ್ಯೆಗಳಿರುವುದರಿಂದ ಇವುಗಳನ್ನು ಗ್ರಾಮೀಣ ಭದ್ರತಾ ಯೋಜನೆಯಡಿಯಲ್ಲಿ ವಿದ್ಯುದೀಕರಣಗೊಳಿಸಲು ಬರುವುದಿಲ್ಲವೆಂದು ನವೀಕರಿಸಬಹುದಾದ ಇಂಧನ ಮೂಲಗಳ ಮಂತ್ರಾಲಯ, ನವದೆಹಲಿ ಇವರು ತಿಳಿಸಿರುವುದರಿಂದ ಕ್ರೆಡೆಲ್ ಸಂಸ್ಥೆಯು ನವೀಕರಿಸಬಹುದಾದ ಇಂಧನ ಮೂಲಗಳ ಮಂತ್ರಾಲಯ ನವದೆಹಲಿ ಇವರ ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯಡಿಯಲ್ಲಿ ಸೋಲಾರ್ ಪೋಟೋವೋಲ್ಟಾಯಿಕ್ ಮೂಲಕ ವಿದ್ಯುದೀಕರಣಗೊಳಿಸುವ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಗುವುದು

ಇ) ಶಿವಮೊಗ್ಗ ತಾಲ್ಲೂಕಿನ ಶೆಟ್ಟಿಹಳ್ಳಿ ಮತ್ತು ಚಿತ್ರ ಶೆಟ್ಟಿಹಳ್ಳಿ ಗ್ರಾಮಗಳಿಗೆ ಪ್ರತ್ಯೇಕ ಜನಗಣತಿ ಸಂಖ್ಯೆಗಳಿರುವುದರಿಂದ ಇವುಗಳನ್ನು ಗ್ರಾಮೀಣ ಭದ್ರತಾ ಯೋಜನೆಯಡಿಯಲ್ಲಿ ವಿದ್ಯುದೀಕರಣಗೊಳಿಸಲು ಬರುವುದಿಲ್ಲವೆಂದು ನವೀಕರಿಸಬಹುದಾದ ಇಂಧನ ಮೂಲಗಳ ಮಂತ್ರಾಲಯ, ನವದೆಹಲಿ ಇವರು ತಿಳಿಸಿರುತ್ತಾರೆ ಆದುದರಿಂದ ಈ ಗ್ರಾಮಗಳನ್ನು ಗ್ರಾಮೀಣ ಭದ್ರತಾ ಯೋಜನೆಯಡಿಯಲ್ಲಿ ವಿದ್ಯುದೀಕರಣ ಗೊಳಿಸಲು ಬರುವುದಿಲ್ಲ

ಈ) ಈ ಗ್ರಾಮಗಳನ್ನು ಗ್ರಾಮೀಣ ವಿದ್ಯುದೀಕರಣ ಯೋಜನೆಯಡಿಯಲ್ಲಿ ಸೋಲಾರ್ ಪೋಟೋವೋಲ್ಟಾಯಿಕ್ ಮೂಲಕ ವಿದ್ಯುದೀಕರಣಗೊಳಿಸಲು ಅಂದಾಜು ವೆಚ್ಚ ರೂ 12 65 ಲಕ್ಷಗಳಾಗುತ್ತದೆ